**ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು**

**ಸಿ ಸಿ ನಂ. 394/2015**

**ದಿಃ 12-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | | | |
|---|---|---|---|
| ಹೆಸರು | ಲಕ್ಷ್ಮೀನರಸಿಂಹಮಯ್ಯ | ಸಿಡಬ್ಲ್ಯು | **15** |
| ವಯಸ್ಸು | 62 ವರ್ಷ | ಪಿಡಬ್ಲ್ಯು | **07** |
| ತಂದೆ | ಗೋವಿಂದಪ್ಪ | | |
| ವೃತ್ತಿ | ನಿವೃತ್ತ ಹೆಡ್ ಕಾಂಸ್ಟೇಬಲ್ | | |
| ವಾಸಸ್ಥಳ | ಹಿರೇಬಿದನೂರು | | |

**ಮುಖ್ಯ ವಿಚಾರಣೆಃಃ ಎ.ಪಿ.ಪಿ.ರವರಿಂದಃ**

ದಿನಾಂಕ 30-06-2014 ರಿಂದ 31.05.2020 ರವರೆಗೆ ನಾನು ಗೌರಿಬಿದನೂರು ಪುರ ಪೋಲೀಸ್ ಠಾಣೆಯಲ್ಲಿ ಕರ್ತವ್ವ ನಿರ್ವಹಿಸುತ್ತಿದ್ದೇನೆ.

ನಾನು ದಿನಾಂಕ 22-09-2014 ಗೌರಬಿದನೂರು ಪೋಲಿಸ್ ಠಾಣೆಯಲ್ಲಿ ಠಾಣಾಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಬೆಳಿಗೆ 7-00 ಗಂಟೆ ಸಮಯದಲ್ಲಿ ಗೌರಿಬಿದನೂರು ಸರ್ಕಾರಿ ಆಸ್ವತ್ರೆಯಿಂದ ಬಂದ ಗಾಯಾಳುವಿನ ಮೆಮೊವನ್ನು ಪಡೆದು ಸರ್ಕಾರಿ ಆಸ್ವತ್ರೆಗೆ ಹೋಗಿ ಗಾಯಾಳುವಾದ ಜಯಮ್ಮ ಕೋಂ ಲೇಟ್ ಕರಿಯಪ್ಪ, 52 ವರ್ಷ, ಕೂಲಿ ಕೆಲಸ ಇಡಗೂರು ಗ್ರಾಮ ರವರು ನೀಡಿದ ಹೇಳಿಕೆಯನ್ನು ಪಡೆದುಕೊಂಡು ಠಾಣೆಗೆ ಬಂದು ಸದರಿ ಹೇಳಿಕೆಯನ್ನು ತನಿಖಾಧಿಕಾರಿಯಾದ ಚಾಸಾ-18 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ಬರೆದ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು.

<u>ಸಿ ಸಿ ನಂ.394/2015</u>

ಪಾಟಿ ಸವಾಲು ಶ್ರೀ ಕೆ ಆರ್ ಆರ್  ಆರೋಪಿ ಪರ ವಕೀಲರಿಂದಃ

ನಾನು ಆಸ್ಪತ್ರೆಯಲ್ಲಿ ಯಾವುದೇ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.  ನಾನು ಗಾಯಾಳುವಿನ ಹೇಳಿಕೆಯನ್ನು ಪಡೆಯಲು ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.  ನಿಪಿ-11 ರ ಹೇಳಿಕೆಯು ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

**ಓ.ಹೇ.ಕೇ.ಸ. ಇದೆ**

**ಸಹಿ/-**
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು